

ತಿಳಿಯತೊಡಗಿತು. ಪರಿಸ್ಥಿತಿ ಅವನಂದುಕೊಂಡ ಎಲ್ಲಕ್ಕಿಂತಲೂ ಗಂಭೀರವಾಗಿತ್ತು.

"ನಬಿಲ್ ಇದರಲ್ಲಿ ನನ್ನ ತಪ್ಪಿಲ್ಲ..." ಜಾಧವ್ ಮೆಲ್ಲಗೆ, ಆದರೆ ಖಚಿತವಾಗಿ ನುಡಿದ.

"ಅಲ್ಲಿದ್ದ ಯಾರೂ ತಪ್ಪು ಮಾಡಿರಲಿಲ್ಲ ಜಾಧವ್. ಎಷ್ಟೋ ಜನಕ್ಕೆ ತಾವ್ಯಾಕೆ ಅಲ್ಲಿದ್ದೇವೆಂದು ಕೂಡ ಗೊತ್ತಿರಲಿಲ್ಲ. ಕೈಯಿಂದ ಕೈಗೆ ತಾಗಿಸಿ ಶವಗಳನ್ನು ಹೊರಕಳಿಸುತ್ತಿದ್ದೆವು. ಕೆಲವೊಮ್ಮೆ ಬೇಕಂತಲೇ ಅವನ್ನು ಹೊರಗೆ ಸಾಗಿಸಲು ಬಿಡುತ್ತಿರಲಿಲ್ಲ. ಕೊಳೆತು ನಾರಿ ದುರ್ವಾಸನೆ ಬಂದು ಇನ್ನಷ್ಟು ಹೆದರಲಿ ಅಂತ ಕಾಯುತ್ತಿದ್ದರು. ಪ್ರತಿದಿನ ಯಾರೋ ಒಬ್ಬರನ್ನು ಎಳೆದೊಯ್ಯುತ್ತಿದ್ದರು. ಇಡೀ ದಿನ ಶಿಕ್ಷಿಸುತ್ತಿದ್ದರು. ಮಾಡಿಲ್ಲದ ಅಪರಾಧಗಳ ಪಟ್ಟಿಯನ್ನು ಕೊಟ್ಟು ಒಪ್ಪಿಕೋ ಅಂತ ಹಿಂಸಿಸುತ್ತಿದ್ದರು. ಹೌದು ಎಂದು ಹೇಳುವವರೆಗೆ ಥಳಿಸುತ್ತಿದ್ದರು. ವಿಧಿಯಿಲ್ಲದೆ ಹೌದು ಎಂದು ಹೇಳಿದ ನಂತರ, "ಹೌದೇನೋ ನಮಕ್ ಹರಾಂ?" ಅಂತ ಯಾತನೆ ಮುಂದುವರೆಸುತ್ತಿದ್ದರು. ನೀನು ಅದನ್ನು ನೋಡಿರಬೇಕಿತ್ತು. ನಿನಗಿಂತ, ನಿನ್ನ ಕ್ಯಾಮೆರಾ ಕಣ್ಣುಗಳು ನೋಡಿರಬೇಕಿತ್ತು. ಅದು ಜಗತ್ತಿನ ಕಣ್ಣಿಗೆ ಬೀಳಬೇಕಿತ್ತು. ಬರೀ ಕೈ ಬೆರಳುಗಳಿಂದ ಜನರ ಕಣ್ಣ ಗುಡ್ಡೆಗಳನ್ನು ಕೀಳುತ್ತಿದ್ದರು"

"ಅಬ್ಬಾ ಘೋರ..." ಬರೇ ಕೇಳುವುದರಿಂದಲೇ ಜಾಧವನ ಕರುಳು ಕಿರುಚಿತು.

"ಘನ ಘೋರ" ನಬಿಲ್ ಜಾಧವನ ಉಪಸ್ಥಿತಿಯ ಅರಿವಿಲ್ಲದವನಂತೆ ಮುಂದುವರೆಸಿದ. "ನರಕಗಳಲ್ಲಿ ನರಕ ಅಂದರೇನು ಗೊತ್ತಾ? ದಿನವಿಡೀ ಶಿಕ್ಷೆ ಅನುಭವಿಸಿ ಸಾಯುವುದು ನರಕವಲ್ಲ. ದಿನವೊಂದಕ್ಕೆ ಇನ್ನೂರು ಬಾರಿ ಸಾಯುವುದಿದೆಯಲ್ಲ, ಅದು ನಿಜವಾದ ನರಕ. ಒಂದು ಗುಂಡು ಹಾಕಿ ಕೊಲ್ಲಿ ಅಂತ ಪ್ರತಿದಿನ ಕಾಲು ಹಿಡಿದು ಬೇಡುತ್ತಿದ್ದೆ. ಅದಕ್ಕೆಂದೇ ಅವರು ನನ್ನನ್ನು ಜೀವಂತವಿಟ್ಟರು! ಅವರು ನಮ್ಮ ಮೇಲೆ ಗುಂಡುಗಳನ್ನು ವ್ಯರ್ಥಮಾಡಲು ಸಿದ್ಧವಿರಲಿಲ್ಲ. ನಾವು ಅವರಿಗೆ ಅದಕ್ಕಿಂತ ನಿಕೃಷ್ಟವಾಗಿದ್ದೆವು. ನಮ್ಮಲ್ಲಿ ಅರ್ಧ ಜನ ಹುಚ್ಚರಾದರೆ, ಇನ್ನರ್ಧ ಜನ ನೋವು–ಹಸಿವಿನಿಂದ ಸಾಯುತ್ತಿದ್ದರು. ಆದರೆ, ಆತ್ಮವನ್ನು ಮಾರಿಕೊಂಡ ಸೈತಾನರಿಗೆ ಕರುಣೆಯಿರುವುದಿಲ್ಲ".

ನಬಿಲ್ ಕೊನೆಯಲ್ಲಿ ಅಂದ ಮಾತು ತನಗೇ ತಟ್ಟಿದಂತಾಗಿ ಜಾಧವ್ ದನಿ ಏರಿಸಿದ

"ನಾನು ನಿನ್ನ ಬಗ್ಗೆ ಮಾಹಿತಿ ನೀಡಲಿಲ್ಲ. ನೀನು ತಪ್ಪು..."

"ಹಾಗಾದರೆ, ನಾನು ಕರೆ ಮಾಡಿದಾಗ ನೀನ್ಯಾಕೆ ಫೋನ್ ಎತ್ತಲಿಲ್ಲ?" ಈಗ ನಬಿಲ್ ಕುದಿಯುತ್ತಿದ್ದ. ಗುಳಿಬಿದ್ದ ಅವನ ಕಣ್ಣ ಗುಡ್ಡೆಗಳು ಗಲಗಲನೆಂದು ಜೀವ ಪಡೆದು ಅವುಗಳಲ್ಲಿ ದ್ರೋಹಕ್ಕೊಳಗಾಗಿದ್ದ ಸಿಟ್ಟು, ಅಪಮಾನ ಮತ್ತು ಅಸಮಾಧಾನದ ಕಿಡಿಗಳು ಚಟ ಪಟವೆನ್ನಹತ್ತಿದವು.

"ನಬಿಲ್ ನಿನ್ನ ಪ್ರಶ್ನೆಗೆ ನನ್ನ ಹತ್ತಿರ ನೇರ ಉತ್ತರವಿಲ್ಲ... ಆದರೆ ನಡೆದದ್ದನ್ನು ಹೇಳು."

"ಹೇಗಿರುತ್ತೆ ಹೇಳು? ನನ್ನ ಆ ಸಿಮ್ ನಂಬರ್ ನಿನಗಲ್ಲದೆ ನಾನು ಇನ್ಯಾರಿಗೂ ಕೊಟ್ಟಿರಲಿಲ್ಲ. ಅದೇ ನಂಬರಿನಿಂದ ನಿನಗೆ ಹತ್ತಾರು ಬಾರಿ ಫೋನ್ ಮಾಡಿದೆ, ನಿನಗೆ ಏನಾಯಿತೋ ಎನ್ನುವ ಆತಂಕ ನನಗಿತ್ತು. ಒಂದು ದಿನ ಅದೇ ನಂಬರಿನಿಂದ ನೀನು ನನ್ನನ್ನು ಅರ್ಜೆಂಟ್ ಭೆಟ್ಟಿಯಾಗಬೇಕೆಂದು ಯಾರೋ ಫೋನ್ ಮಾಡಿ ಹೇಳಿದರು. ನಿನ್ನ ಕಡೆಯವರೇ ಇರಬೇಕೆಂದು ನಂಬಿ ಹೋದ ಕೂಡಲೆ ನನ್ನನ್ನು ಹಿಡಿದರು. ನನ್ನ ದೇಶದ ಉಳಿವಿಗಾಗಿ ಆಶಿಸಿದ ನನ್ನನ್ನು 'ದೇಶದ್ರೋಹಿ' ಎಂದರು. ರಹಸ್ಯ ಜೈಲಿಗೆ ಕಳಿಸಿದರು. ಅದು ಎಲ್ಲಿತ್ತು ಎನ್ನುವುದೇ ಜಗತ್ತಿಗೆ ಗೊತ್ತಿಲ್ಲದ ಮೇಲೆ ನಾವು ಎಲ್ಲಿದ್ದೆವು ಎಂದು ಯಾರಿಗೆ ತಾನೇ ಗೊತ್ತಿರಲು ಸಾಧ್ಯವಿತ್ತು? ನಾಲ್ಕು ವರ್ಷಗಳ ಕಾಲ ನಾನು ನರಕ ಅನುಭವಿಸಿದೆ..." ನಬಿಲ್ ಈಗ ದುಃಖದಿಂದ ಕಂಪಿಸುತ್ತಿದ್ದ. ಗುಳಿಬಿದ್ದ ಕಣ್ಣುಗಳಲ್ಲಿ ನೀರ ಪಸೆಯಾಡಿತ್ತು.

ಅದೆಷ್ಟು ಅತ್ತಿದ್ದನೋ, ಪ್ರತಿದಿನವೂ ಅದೆಷ್ಟು ನೊಂದಿದ್ದನೋ ಎಂಬ ವಿಚಾರವನ್ನು ಜಾಧವ್‌ಗೆ ಊಹಿಸಲೂ ಸಾಧ್ಯವಿರಲಿಲ್ಲ. ಜೀವನದಲ್ಲಿ ಒಳ್ಳೆಯತನ, ಉತ್ಸಾಹಗಳ, ಉನ್ನತ ಆಶಯಗಳ ಈ ಪರೋಪಕಾರಿ ಗೆಳೆಯನನ್ನು ಈ ಸ್ಥಿತಿಯಲ್ಲಿ ನೋಡುವುದು ಅವನಿಗೆ ಕಷ್ಟವಾಯಿತು. ಜಾಧವನ ಹೃದಯ ಹದ ತಪ್ಪಿ ಹೊಡೆದುಕೊಳ್ಳತೊಡಗಿತು. ಆದರೆ, ಅವನ ಈ ಸ್ಥಿತಿಗೆ ನಾನು ಹೇಗೆ ಕಾರಣನಾಗುತ್ತೇನೆ? ಜಾಧವ್ ಗಲಿಬಿಲಿಗೊಂಡ. ಸಾವರಿಸಿಕೊಂಡು,"ನನಗರ್ಥವಾಗುತ್ತೆ ನಬಿಲ್..." ಎಂದು ಗೆಳೆಯನನ್ನು ತಬ್ಬಿ ಸಾಂತ್ವನ ಹೇಳಲು ಹೋದ.

"ಏನರ್ಥವಾಗಿದೆ?" ನಬಿಲ್ ವ್ಯಂಗ್ಯ ತುಂಬಿದ ದನಿಯಲ್ಲಿ ಕರ್ಕಶವಾಗಿ ಕಿರುಚಿ, ಹಿಂತೆಗೆದ. ಜಾಧವನನ್ನು ಮುಟ್ಟಿಸಿಕೊಳ್ಳಲೂ ಅವನು ಅಸಹ್ಯಪಟ್ಟಂತಿತ್ತು. ಆದರೆ, ನೆನಪುಗಳ ನೋವಿನ ನೀರ ಹನಿಗಳಲ್ಲಿ ಅವನ ಕಣ್ಣಾಲಿಗಳು ದೋಣಿಯೊಂದು ಮಗುಚಿಕೊಳ್ಳುತ್ತಿರುವಂತೆ ಮುಳುಗುತ್ತಿದ್ದವು. ಅವನ ಮೂಗಿನ ಹೊರಳೆ–ತುಟಿಗಳು ಒಂದಿಷ್ಟು ಉಸಿರಿಗಾಗಿ ಹೊಡೆದಾಡುತ್ತಿರುವಂತೆ ಅದುರುತ್ತಿದ್ದವು. ಅವನಿಗೆ ಅದಕ್ಕಿಂತ ಹೆಚ್ಚು ಮಾತನಾಡಲಾಗಲಿಲ್ಲ.

ಜಾಧವನೇ ಅವನ ಸಹಾಯಕ್ಕೆ ಬರುವಂತೆ ನಬಿಲ್ ಅದುವರೆಗೆ ದೂಷಿಸುತ್ತಿದ್ದ ವಿಚಾರಗಳನ್ನು ಪದಗಳಲ್ಲಿಟ್ಟು ಹೇಳಿದ.

"ನಾನು ನಿಮ್ಮೆಲ್ಲರ ಕರುಣಾಜನಕ ಕಥೆಗಳನ್ನು ಮಾಧ್ಯಮಗಳಲ್ಲಿ ಮಾರಿಕೊಂಡು ಸುಖಪಟ್ಟೆ. ಆದರೆ ನನಗೆ ಸಹಾಯ ಮಾಡಿದ ನೀನು, ನಾಲ್ಕು ವರ್ಷ ನರಕದಲ್ಲಿ ನರಳಿದೆ. ನಿನ್ನ ಪ್ರಕಾರ ನಾನೇ ಅದಕ್ಕೆ ಜವಾಬ್ದಾರ? ಅದಕ್ಕೇ ನಿನಗೆ ನನ್ನ ಮೇಲೆ ಕೋಪ..?!"

ಹೌದೆನ್ನುವಂತೆ ಮೊದಲ ಬಾರಿಗೆ ನಬಿಲ್ ಸುಮ್ಮನೆ ಕುಳಿತ.

ತನ್ನ ವ್ಯಕ್ತಿತ್ವವನ್ನೇ ಅಸಹ್ಯ ಕೊಳಕೆಂದ ಗೆಳೆಯನ ಮಾತನ್ನು ಕೇಳಿ ಜಾಧವ್ ಅಪಮಾನಗೊಂಡು ಒತ್ತರಿಸಿಕೊಂಡು ಬಂದ ದುಃಖದಿಂದ ಗದ್ಗದಿತನಾದ. ಅವನೀಗ ತಾನು ಗೆಳೆಯನಿಗೆ ದ್ರೋಹವೆಸಗಿಲ್ಲವೆಂಬುದನ್ನು ಖಾತ್ರಿಪಡಿಸಬೇಕಿತ್ತು.

"ನಬಿಲ್... ನೆನಪಿಟ್ಟುಕೋ... ನಿನ್ನ ಹೋರಾಟವನ್ನು ಜಗತ್ತಿಗೆ ತಲುಪಿಸಲು ನಾನು ಪ್ರಾಮಾಣಿಕವಾಗಿ ಪ್ರಯತ್ನಿಸಿದೆ. ಈ ವಿಚಾರಕ್ಕಾಗಿ ಆರು ತಿಂಗಳು ನನ್ನ ಜೀವ ಒತ್ತೆಯಿಟ್ಟು ನಿಮ್ಮ ದೇಶದ ಬವಣೆಗಳನ್ನು ಜಗತ್ತಿನ ಮುಂದಿಟ್ಟೆ. ಅದನ್ನು ನನ್ನ ಕರ್ತವ್ಯ ಎಂದು ನಿರ್ವಹಿಸಿದೆ. ನಿನ್ನ ಮತ್ತು ನಿಮ್ಮೆಲ್ಲರ ಸಹಾಯ, ಆಶ್ರಯದಿಂದ ಅದನ್ನು ಜಗತ್ತಿನ ಜನರಿಗೆ ತಿಳಿಸಲು ಸಾಧ್ಯವಾಯಿತು. ಆದರೆ ನಾನೊಬ್ಬನೇ ಒಬ್ಬ, ಅಥವಾ ಬರೇ ಮಾಧ್ಯಮಗಳು ಇನ್ನೇನು ತಾನೇ ಮಾಡಲು ಸಾಧ್ಯವಿತ್ತು ಹೇಳು? ನಿನ್ನ ಊರು ಕೂಡ ಈಗ ಇಬ್ಭಾಗವಾಗಿ ಮಿಲಿಟರಿ ಮತ್ತು ಮಿಲಿಶಿಯಗಳ ವಶವಾಗಿದೆ. ಯುದ್ಧಗಳೇ ತಪ್ಪು ನಬಿಲ್. ಇನ್ನು ಆಂತರಿಕ ಯುದ್ಧಗಳಲ್ಲಿ ನೋಯುವ ಜನರಿಗೆ ಹೊರಗಿನ ಶತ್ರುಗಳೂ ಇರುವುದಿಲ್ಲ. ನೀನು ಮತ್ತು ನಾನು, ನಮ್ಮ ಕೈಲಾದ ಪ್ರಯತ್ನವನ್ನು ಮಾಡಿದೆವು ಅಂದುಕೊಳ್ಳಬಹುದು ಅಷ್ಟೆ".

"ಆದರೆ, ನಮ್ಮ ವಿವರಗಳನ್ನು ಮಾರಿಕೊಂಡ ದ್ರೋಹಿಗಳ ಬದುಕು ಈಗ ಹಸನಾಗಿರಬೇಕು...?" ವ್ಯಂಗ್ಯ ತುಂಬಿದ ನಬಿಲ್‌ನ ಧ್ವನಿ ಸ್ವಲ್ಪ ತಗ್ಗಿತ್ತು, ಕೋಪ ಇಳಿದಿರಲಿಲ್ಲ.

"ನನ್ನ ದೇಶವೀಗ ಒಂದು ಸ್ಮಶಾನ. ಪ್ರೇತಗಳ ಬೀಡು. ಅವರು ನನ್ನನ್ನೂ ಬಿಡುತ್ತಿರಲಿಲ್ಲ. ಆಂತರಿಕ ಯುದ್ಧಕ್ಕೆ ಮುನ್ನ ನಾನೊಬ್ಬ ಸಾಮಾನ್ಯ ಐ.ಟಿ. ಉದ್ಯೋಗಿ. ಅಲ್ಲಿಯವರೆಗೆ ಲೆಬನಾನ್, ಪ್ಯಾಲೆಸ್ತೀನ್‌ನಿಂದ ಓಡಿಬಂದಿದ್ದ ಯುದ್ಧ ನಿರಾಶ್ರಿತರಿಗೂ ನನ್ನ ಕೈಲಾದ ಸಹಾಯ ಮಾಡಿದವನು ನಾನು. ಒಂದು ದಿನ ನಾನೇ ಯುದ್ಧ ನಿರಾಶ್ರಿತನಾಗ್ತೀನಿ ಅಂತ ಕನಸು ಮನಸ್ಸಿನಲ್ಲೂ ಅಂದುಕೊಂಡಿರಲಿಲ್ಲ. ವರದಿ ಮಾಡುತ್ತೇನೆ ಅಂತ ಅಲೆಪ್ಪೋಗೆ ಬಂದ ನಿನ್ನ ಮೂಲಕ ಜಗತ್ತಿನ ಕಣ್ಣಿಗೆ ನಮ್ಮ ದೇಶದಲ್ಲಿ ನಡೆದದ್ದನ್ನು ಇದ್ದಂತೆ ತೋರಿಸಿದ್ದನ್ನು ಬಿಟ್ಟರೆ ನಾನಿನ್ನೇನೂ ತಪ್ಪು ಮಾಡಿದವನಲ್ಲ. ಆದರೆ ಮಿಲಿಟರಿ ನನ್ನನ್ನು ದೇಶದ್ರೋಹಿ ಎಂದು ಕರೆಯಿತು. ಜೈಲಿನಲ್ಲಿ ಆಗಲೋ ಈಗಲೋ ಸಾಯುವಂತಿದ್ದ ನನ್ನನ್ನು ರಾಜಕೀಯ ಕೈದಿಗಳ ಅದಲು ಬದಲು ಕಾರ್ಯಕ್ರಮದಲ್ಲಿ ಟರ್ಕಿಗೆ ನೀಡಿದರು. ಅದಕ್ಕೆಂದೇ ನನ್ನಂತ ಕೆಲವು ಅಮಾಯಕರನ್ನು ಕೊಲ್ಲದೆ ಉಳಿಸಿಕೊಂಡಿದ್ದರು ಅಂತ ನನಗೆ ಅರ್ಥವಾಗಿದ್ದು ಆಗಲೇ... ಅದೊಂದೇ ಕಾರಣಕ್ಕೆ ಬದುಕುಳಿದೆ. ಟರ್ಕಿಯ ನಿರಾಶ್ರಿತರ ಶಿಬಿರ ತಲುಪುವವರೆಗೆ ನಾನೊಂದು ಎಲುವು ಚಕ್ಕಳಗಳ ಚೀಲವಷ್ಟೇ. ಅಲ್ಲಿಂದ ಗ್ರೀಸ್ ಬಾರ್ಡರನ್ನು ಪ್ರವೇಶಿಸಿ ಅವರಿವರ ಕಾಲು ಹಿಡಿದು ರಾತ್ರಿಯ ಕಡುಕತ್ತಲು, ಕೊರೆಯುವ ಚಳಿಯಲ್ಲಿ ಫ್ರಾನ್ಸ್ ತಲುಪಿದೆ. ಕಳ್ಳ ಮಾಲಿನಂತೆ ಇಂಗ್ಲಿಷ್ ಚಾನೆಲ್ ಹಾದು ಇಂಗ್ಲೆಂಡ್ ತಲುಪಿದೆ. ನಡುವೆ ಅರವತ್ತೂರು ಜನರಿದ್ದ ನಮ್ಮ ಬೋಟ್ ಮುಳುಗಿತು. ಬದುಕುಳಿದ ಕೆಲವೇ ಕೆಲವು ಜನರಲ್ಲಿ ನಾನೂ ಒಬ್ಬನಾಗಿದ್ದೆ. ಈಗಿಲ್ಲಿ ನಾನು ಯುದ್ಧ ನಿರಾಶ್ರಿತ. ಇಲ್ಲಿಗೆ ಬಂದ ನಂತರ ಮೊದಲು ಮಾಡಿದ ಕೆಲಸವೆಂದರೆ ನಿನ್ನನ್ನು ಹುಡುಕುವುದು".

"ನಬಿಲ್, ಒಳ್ಳೇ ಕೆಲಸ ಮಾಡಿದೆ. ದೇವರು ದೊಡ್ಡವನು. ನಿನಗೆ ಕೈಲಾದ ಸಹಾಯ ಮಾಡ್ತೀನಿ". ಜಾಧವ್ ಏನು ಹೇಳಬೇಕೆಂದು ತಿಳಿಯದೆ ಅಸಹಾಯಕನಾಗಿ ಉಸುರಿದ.

